ಮೆಂಬರಾಗಿರುವ ಎರಡು ಖಾಸಗಿ ಶಾಲೆಗಳಿದ್ದವು. ಅವಳಿಗೆ ಒಂದು ಕಡೆ, ಅಂತಹ ಪ್ರಸಂಗ ಬಂದರೆ, ಕೊಡಿಸುವುದು ಕಷ್ಟವಲ್ಲ ಅನ್ನುವ ನಂಬಿಕೆಯಿತ್ತು. ಹತ್ತಿರ ಹೋಗಿ ಅವಳ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡ. 'ಹೆದರೋ ಕೆಲಸವಿಲ್ಲ. ಹಾಗೇ ಮಾಡೋಣ' ಅವಳ ಹಸ್ತವನ್ನು ಮೆತ್ತಗೆ ಹಿಸುಕಿದ ಭರವಸೆ ಕೊಡುವವನಂತೆ.

***

ಮನೆಗೆ ಬಂದಾಗ ಅಜ್ಜ ಅಜ್ಜಿ ಇಬ್ಬರೂ ಹಾಲಿನಲ್ಲಿ ಕುಳಿತಿದ್ದರು. ಒಬ್ಬರ ಮುಖದಲ್ಲೂ ಸಮಾಧಾನವಿರಲಿಲ್ಲ. ಯಾವುದೋ ಒತ್ತಡಕ್ಕೊಳಗಾದವರಂತೆ ಕುಳಿತಿದ್ದರು. ಈ ಸಮಯದಲ್ಲಿ, ಇಬ್ಬರೂ ಹೀಗೆ, ಇಲ್ಲಿ ಕುಳಿತಿದ್ದನ್ನು ಆನಂದ ಯಾವತ್ತೂ ನೋಡಿರಲಿಲ್ಲ. 'ಅಜ್ಜಾ, ಯಾಕೆ ಹೀಗಿದ್ದೀರಿ ಇಬ್ರೂ? ಏನಾಯಿತು?' ಕೇಳಿದ. ದೇಶ್ವಂತರು ಅವನತ್ತ ತಿರುಗಿ ನಿಟ್ಟುಸಿರು ಬಿಟ್ಟರು. 'ಮಗೂ, ನೀನು ಆಗಲೇ ಕೆಲಸಕ್ಕೆ ಸೇರಿದ್ರೆ ಇಷ್ಟರಲ್ಲಿ ಮನೆ, ಆಸ್ತಿ ಹಣ ಎಲ್ಲಾ ಮಾಡಿರತಿದ್ದೆ ಅಲ್ವಾ?' ಕೇಳಿದರು. ಆನಂದನಿಗೆ ತಲೆ ಬುಡ ಒಂದೂ ಅರ್ಥವಾಗಲಿಲ್ಲ. ತನ್ನಿಂದೇನಾದರು ಮಾತಾಡುವಾಗ ತಪ್ಪಾಯಿತೆ? ಯಾಕೆ ಹೀಗೆ ಕೇಳುತ್ತಾರೆ ಅಂತ ಅಚ್ಚರಿಗೊಳಗಾದ.

'ಅಜ್ಜಿ, ಈಗೇನಾಯಿತು ಹೇಳು' ಅಂದ ಆತಂಕದಿಂದ. '...ಇದಾನಲ್ಲೋ ಆ ನಿನ್ನ ದೊಡ್ಡಪ್ಪ; ದುರಾಸೆಯವನು ತಂದು!' ಅಲವತ್ತುಕೊಂಡರು ಆ ಕಡೆ ಮುಖ ತಿರುಗಿಸಿಕೊಂಡು. ಅರ್ಥವಾಗಲಿಲ್ಲ ಅವನಿಗೆ. 'ದೊಡ್ಡಪ್ಪನೇ? ಏನಂತೆ?' ಕೇಳಿದ. ಈಗೊಂದು ತಾಸಾಗಿತ್ತು, ಪಾಂಡುರಂಗ ಫೋನಿನಲ್ಲಿ ಮಾತಾಡಿದ್ದ. ಅಲ್ಲವನಿಗೆ ಡೊಂಬಿವಲಿಯ ಒಳ್ಳೇ ಜಾಗದಲ್ಲಿ ಫ್ಲ್ಯಾಟೊಂದು ಖರೀದಿಗೆ ಸಿಕ್ಕಿತ್ತು. ಇಪ್ಪತ್ತು ಲಕ್ಷ ಕಮ್ಮಿ ಬೀಳುತ್ತಿದೆ ಅಂತ ಬೇಡಿಕೆಯಿಟ್ಟಿದ್ದ. ಈಗೇನು ಬ್ಯಾಂಕುಗಳು ಸಾಲ ಕೊಡತವೆ. ತಗೊಂಡು ಆಮೇಲೆ ತೀರಿಸ್ಲಿ. ಇಲ್ಯಾಕೆ ಕೇಳಬೇಕು? ದೇಶ್ವಂತರಿಗೆ ಅಸಮಾಧಾನವಾಗಿತ್ತು. ಇವರೆಲ್ಲ ಅಲ್ಲಿ ದುಡಿದುಕೊಳ್ಳುತ್ತಿದಾರೆ. ಎಲ್ಲಾ ತಮಗೇ ಇಟ್ಟುಕೊಳತಾರೆ. ತಾವೇನು ಕಿಲುಬುಕಾಸು ಕೇಳಿದ್ದಿಲ್ಲ. ಆದರೆ ಇಲ್ಲಿಯದಕ್ಕು ಬೇಡಿಕೆಯಿಡತಾರಲ್ಲ! ಮೊದಲೂ ಕೇಳಿದ್ದಿದೆ, ತಾವು ಕೊಟ್ಟೂ ಇದ್ದಾರೆ. ಕೊಡಬಾರದು ಅಂತಲ್ಲ. ಆಪತ್ತಿನಲ್ಲಿ ಮತ್ತ್ಯಾರನ್ನ ಕೇಳತಾರೆ? ಆದರೆ ಇದು ಅಂಥದ್ದಲ್ಲ. ಒಬ್ಬರಿಗೆ ಕೊಟ್ಟರೆ ಉಳಿದೋರೂ ಕೇಳತಾರೆ. ಪಿತ್ರಾರ್ಜಿತ ಆಸ್ತಿಯಿರಬಹುದು. ಆದರೆ ಇಲ್ಲೇನು ಶ್ರಮವಿಲ್ಲದೆ ಹುಟ್ಟುವಳಿಯಾಗೋದಿಲ್ಲ. ಎಲ್ಲಾ ಹೀಗೆ ಕೊಡುತ್ತಿದ್ದರೆ ಇಲ್ಲಿ ದುಡಿಯುತ್ತಿರೋ ಆನಂದನಿಗೆ ಮುಂದೇನು ಉಳಿಯುತ್ತದೆ? ಇದನ್ನೇ ಫೋನಿನಲ್ಲಿ ಹೇಳಿದ್ದರು. ಜೇನುಹುಳದಂತೆ ಈ ಮಗು ಎಲ್ಲಾಕಡೆ ಸುತ್ತಾಡಿ ಸಂಗ್ರಹಿಸೋದು; ಕರಡೀ ಹಾಗೆ ಉಳಿದೋರು ತುಪ್ಪ ಬರಗೋದು, ಅಂತ ಬಕುಲಾ ಬಯ್ದದ್ದು ಆ ಕಡೆ ಫೋನಿನಲ್ಲಿ ಕೇಳಿಸಿತ್ತು. ಅದಕ್ಕವನು ಆನಂದನಿಗೇನು ಅಷ್ಟೊಂದು ಕಲಿಸಿಲ್ಲವಾ? ವ್ಯರ್ಥಮಾಡದೆ ಕೆಲಸ ಹಿಡೀಲಿ; ಕೈತುಂಬಾ ಸಂಪಾದಿಸಿ ಇಟ್ಟುಕೊಳ್ಳಲಿ ಯಾರು ಬೇಡ ಅನ್ನೋರು ಅಂತ ಪ್ರತಿ ಹೇಳಿದ್ದ. ದೇಶ್ವಂತರಿಗೆ ಸಿಟ್ಟು ಬಂದಿತ್ತು. ಆನಂದನಿಗೆ ಇದನ್ನೆಲ್ಲ ಕೇಳಿ ಬೇಸರವಾಯಿತು. ಕೊಡಬಾರದು ಅಂತಲ್ಲ. ಇಪ್ಪತ್ತು ಲಕ್ಷ ಹೊಂದಿಸಬಹುದು. ಆದರೆ, ವರ್ಷದ ಉತ್ಪನ್ನ ಸಂಪೂರ್ಣ ಖಾಲಿಯಾಗುತ್ತಿತ್ತು. ಕೈಹಾಕಿದ, ಮಾಡಲೇ ಬೇಕಾದ ಕೆಲಸಗಳೆಲ್ಲ ನಿಂತುಬಿಡುತ್ತವೆ. ಬೇರೆಯವರೂ ಕೇಳಬಹುದು, ಆಗೇನು ಅಂತ ಯೋಚನೆಯಾಯಿತು. ಹೊರಗೆ ಅದನ್ನು ತೋರಿಸಿಕೊಳ್ಳದೆ 'ಈಗ ಅದರ ಯೋಚನೆ ಬಿಡಿ, ಮತ್ತೆ ಫೋನು ಬಂದಾಗ ನೋಡಿಕೊಳ್ಳುವ' ಅಂತ ಅವರನ್ನ ಊಟಕ್ಕೇಳಿಸಿದ.

ಮರುದಿನ ಮತ್ತೆ ಫೋನು ಬಂದಾಗ ಆನಂದನೂ ಇದ್ದ. ಎಲ್ಲರ ಕುಶಲ ವಿಚಾರಿಸಿದ ಪಾಂಡುರಂಗ, ಆನಂದನ ಹತ್ತಿರವು ಮಾತಾಡಿದ. ನಿನ್ನೆಯಂತಲ್ಲ, ಮಾತಿನಲ್ಲಿ ಸಾವಧಾನವಿತ್ತು. ಮಗಳು ದ್ವಿಜಾಳ ವಿದ್ಯಾಭ್ಯಾಸಕ್ಕೆ ಆದ ಖರ್ಚು, ಆಮೇಲೆ ಅವಳ ಮದುವೆಗೆ ಆಗಬಹುದಾದ ಖರ್ಚು ಅಂತೆಲ್ಲ ಸಹಜವಾಗಿ ವಿಚಾರಗಳನ್ನು ಹಂಚಿಕೊಂಡ. ಆಮೇಲೆ ಫ್ಲ್ಯಾಟಿನ ಸುದ್ದಿಯನ್ನು ಹೇಳಿದ. ಶಹರದಲ್ಲಿ ಸ್ವಂತ ಸೂರೊಂದಾದರೆ ಮನಸಿಗೆ ನೆಮ್ಮದಿ, ಅದಕ್ಕೆ ಪ್ರಯತ್ನ ಮಾಡುತ್ತಿರುವುದು ಅಷ್ಟೆ ಅಂತಂದ. ಇವರಾಗೆ ಪ್ರಸ್ತಾಪವನ್ನು ಎತ್ತುಗಡೆ ಮಾಡಲಿ ಅಂತ ಜಾಣ್ಮೆ ಪ್ರದರ್ಶಿಸುತ್ತಿರುವುದು ಗೊತ್ತಾಗುತ್ತಿತ್ತು. ತಾವಾಗಿ ಏನೂ ಹೇಳುವುದು ಬೇಡ ಅಂತ ದೇಶ್ವಂತರು ಸನ್ನೆ ಮಾಡಿದರು. ಆದರೆ ಬಕುಲಾರಿಗೆ ತಡೆದುಕೊಳ್ಳಲಾಗಲಿಲ್ಲ. ಫೋನಿಸಿದುಕೊಂಡವರು, ಎಲ್ಲಾದಕ್ಕು ಇಲ್ಲಿಯದನ್ನೇ ಅವಲಂಬಿಸಿದರೆ ಹೇಗೆ? ಅವರವರ ಗಳಿಕೆಯನ್ನೂ ಅಷ್ಟು ಉಪಯೋಗಿಸಬಾರದ? ಅಂತ ಗಟ್ಟಿಯಾಗೆ ಹೇಳಿಬಿಟ್ಟರು. ಅವನಿಗದು ಉರಿಬಿತ್ತು. ಅಲ್ಲಿರುವ ಆಸ್ತಿ ತನಗೂ ಸೇರಿದ್ದು. ಶಾಂತಾರಾಮನ ಅರ್ಧ ಆಸ್ತಿಯಲ್ಲಿ ಮಾತ್ರ ಅವನ ಮಗ ಆನಂದನಿಗೆ ಸೇರೋದು ಅಂದುಬಿಟ್ಟ. ಆಮೇಲೆ ಹದ್ದು ಮೀರಿ ಮಾತಾಡಿಬಿಟ್ಟೆ ಅನಿಸಿರಬೇಕು, ತಪ್ಪು ತಿಳೀಬೇಡಿ ಅಂತ ಸಮಾಧಾನದಲ್ಲಿ ತನ್ನ ಗೋಳುಗಳನ್ನು ವರದಿ ಮಾಡಿ, ತಲೆಚಿಟ್ಟು ಹಿಡಿಸಿ ಫೋನಿಟ್ಟ. ದೇಶ್ವಂತರ ಮನಸು ತೀವ್ರ ಕ್ಷೋಭೆಗೊಳಗಾಯಿತು. ಇಂತಹ ಮಾತನ್ನು ಕಿರಿಯರಿಂದ ಹಿಂದೆಂದೂ ಕೇಳಿರಲಿಲ್ಲ. ಬಕುಲಾ ತನ್ನ ಮಗನೆ ಹೀಗೆ ಹಕ್ಕಿನ ಮಾತಾಡಿದ್ದಕ್ಕೆ ನೊಂದುಕೊಂಡರು.

ಆನಂದನಿಗೂ ಆಘಾತವಾಗಿತ್ತು. ಒಬ್ಬನೇ ಕುಳಿತು ಯೋಚಿಸಿದ. ಮಾತಿಲ್ಲದೆ ಎಷ್ಟೋ ಹೊತ್ತಿಂದ ಖಿನ್ನರಾಗಿ ಚಿಂತಿಸುತ್ತ ಕುಳಿತಿದ್ದ ಅಜ್ಜ ಅಜ್ಜಿಯರ ಹತ್ತಿರ ಹೋದ. 'ಅಜ್ಜಾ ಮತ್ತು ಅಜ್ಜಿ, ಇಲ್ಲಿ ಕೇಳಿ. ದೊಡ್ಡಪ್ಪನ ಮಾತಿಗೆ ಅಷ್ಟೇಕೆ ಬೇಸರ ಮಾಡಿಕೊಳ್ಳುತೀರಿ? ನಾನೇನು ಆದರ್ಶ ಮನುಷ್ಯ ಅಂತ ಹೇಳಿಸಿಕೊಳ್ಳೋದಕ್ಕೆ ಕೃಷಿಗೆ ಬಂದಿಲ್ಲ. ಇದು ನಂಗೆ ಖುಷಿ. ಇಲ್ಲಿರೋದು ನನ್ನ ಸ್ವಭಾವಕ್ಕೆ ಹೊಂದುತ್ತದೆ. ಅದಕ್ಕಿದ್ದೇನೆ. ಅರ್ಧ ಆಸ್ತಿಯೆ ಬಂತೋ, ಅದೇ ನಮಗೆ ಸಾಕು. ಆದಾಯ ಕಮ್ಮಿ ಅನಿಸಿದರೆ ಫುಡ್ ಪ್ರೊಸೆಸಿಂಗ್ ಉದ್ಯಮವೊ ಮತ್ತೇನೊ ಇಲ್ಲೇ ಚಿಕ್ಕದಾಗಿ ಶುರುಮಾಡೋಣ' ಅಂತ ನಸುನಕ್ಕ. ಅವನ ಮಾತಿನಲ್ಲಿಯ ಧೈರ್ಯ, ಆತ್ಮವಿಶ್ವಾಸ ವಯಸ್ಸಾದ ಇಬ್ಬರನ್ನೂ ತಾಕಿತು. ಹೌದಲ್ಲ! ಅನಿಸಿತು. 'ಅದು ಹೇಗೆ ಅರ್ಧ ಅವನಿಗೆ? ನಮಗೂ ಪಾಲಿಲ್ಲವಾ? ಅದನ್ನು ನಿಂಗೇ ಕೊಡತೇವೆ. ನೀನು ಅದನ್ನು ಬೆಳೆಸು' ಅವನ ಬೆನ್ನು ತಟ್ಟಿದರು. ಅವರಲ್ಲಿ ಹುರುಪಿನ ಸಂಚಲನವುಂಟಾಗಿ ಎದ್ದು ಚುರುಕಾಗಿ ಓಡಾಡತೊಡಗಿದರು.

13

ಶಶಿಕಾಂತ ಪಾಟೀಲ ರಾತ್ರಿ ಅನಿರೀಕ್ಷಿತವಾಗಿ ಫೋನು ಮಾಡಿ, ಬೆಳಗ್ಗೆನೆ ಬಂದಿಳಿದ. ಧಾರಾವಾಹಿಯ ಜನಪ್ರಿಯತೆಯಿಂದಾಗಿ ಮತ್ತೊಂದು ಲೇಖನ ಬರೆಯಲು ಅವನಿಗೆ ಹೇಳಿದ್ದರು. 'ನೋಡಪ್ಪಾ, ಹೆಸರು ದೊಡದಾಗ್ತಾ ಹೋಗತಿದ್ದಾಂಗಾ ಹೆಚ್ಚುಹೆಚ್ಚು ಕಣ್ಣುಗೋಳು ಬೀಳತಾ ಹೋಗತಾವ. ಕೆಲವು ಸುಮ್ನ ನೋಡವಿರತಾವ; ಕೆಲವು ಚುಚ್ಚವು ಇರತಾವ' ಅಂದಿದ್ದ. 'ಯಾಕೋ? ಅಂತದೇನಾಯ್ತು ಈಗ?' ಕೇಳಿದ ಆನಂದ. ಅದಕ್ಕೆ ನಕ್ಕು 'ಹಿಂಗಾ ಲೋಕಾರೂಢಿ ಮಾತಂದೆ' ಅಂದ. ಸ್ನಾನ ತಿಂಡಿ ಮುಗಿಸಿ ರಾಜ್ಯ, ದೇಶ ಅಂತೆಲ್ಲ ಸುದ್ದಿ ವಿನಿಮಯವಾಯ್ತು. ಪುರಾತನ ಭವನ, ಜನರಲ್ಲಿ ಆಕರ್ಷಣೆಯನ್ನು ದೊಡ್ಡ ರೀತಿ ಬೆಳೆಸಿಕೊಳ್ಳುತ್ತಿತ್ತು. ಕ್ಯಾಮರಾದ ಕಣ್ಣಲ್ಲಿ ಬೇರೆಯದೆ ರೀತಿಯಲ್ಲಿ ಮೂಡುತ್ತ, ಕಥೆಯ ರೋಚಕತೆಯೊಂದಿಗೆ ಅದರ ಬಗ್ಗೆ ಮೋಹಕತೆಯೊಂದು ಹುಟ್ಟಿಕೊಂಡು ದೊಡ್ಡದಾಗುತ್ತಿತ್ತು. ಪಾಟೀಲನಿಗೆ ಈ ಸಾರಿ ಅದರ ಇತಿಹಾಸವನ್ನೂ ಕೆದಕಲು ಸೂಚನೆ ಕೊಡಲಾಗಿತ್ತು. ಕಥಾನಾಯಕಿ ಅಡಗಿ ಕುಳಿತು ಕಾರ್ಯಸಾಧನೆ ಮಾಡುವ, ಪ್ರತಿಯಾಗಿ ವಿರೋಧಿಗಳು ಕಾರಸ್ಥಾನ ಮಾಡುತ್ತ ಅವಳನ್ನು ಸೋಲಿಸಲು ಏನೆಲ್ಲ ಮಾಡುವ ಕಥಾಹಂದರಕ್ಕೆ, ಈ ಪರಿಸರ ಯಾವ ರೀತಿ ವರದಾನವಾಗಿ ಬಂದು, ಅರ್ಧ ಯಶಸ್ಸನ್ನು ಅದೇ ಹುಟ್ಟುಹಾಕುತ್ತಿದೆ ಅಂತ ಬರೆದ ಪಾಟೀಲ. ಮನೆಯವರಿಗೆಲ್ಲ ಸಲುಗೆಯವನಾಗಿದ್ದಕ್ಕೆ ಮಾತಿನ ಭರದಲ್ಲಿ ಆನಂದನಿಂದ, ಬಕುಲಾರಿಂದ ಮನೆಯ ಅನೇಕ ಸಂಗತಿಗಳ ವಿವರ ಅವನಿಗೆ ಸಿಗುತ್ತಿತ್ತು. ಅವತ್ತೆಲ್ಲ ಅಲ್ಲೇ ಇದ್ದು, ಮರುದಿನ ವಾಪಸು ಹೋದ. ಹೊರಡುವ ಮೊದಲು ಇಬ್ಬರೆ ಇದ್ದಾಗ 'ಹೀರೋಯಿನ್ನಿಗೂ ನಿಂಗೂ ನಡುವೆ ಏನೋ ಕೆಮಿಸ್ಟ್ರಿ ಕಂಡತಲ್ಲೋ? ಜೋರಿದೀಯಪ ಮತ್ತ ನೀನೂ' ಅಂತ ಹುಬ್ಬು ಕುಣಿಸಿದ. 'ಯೇ... ಅಂತದೇನಿಲ್ಲಪಾ' ಅಂದದ್ದಕ್ಕೆ `ಬಿಡೋ ಆನಂದ, ಏನೂ ಇಲ್ಲದ್ನೇ ಗಾಸಿಪ್ ಬರಿಯೂ ಮಂದಿ ನಾವು! ಅಂತಾದ್ರಾಗ ಇದು ಗೊತ್ತಾಗೂದಿಲ್ಲ ಅಂತ ಮಾಡಿಯನು?' ನಕ್ಕ, ತನಗೆ ಗೊತ್ತಾಗುವುದಿಲ್ಲವೆ ಅನ್ನುವಂತೆ. 'ಪಾಟೀಲ, ಹಾಗೆಲ್ಲಾ ಎಲ್ಲಾದ್ರು ಬರದುಬಿಟ್ಟೀಯಪಾ! ಎಲ್ಲಿ ಪ್ರಾಮೀಸ್ ಮಾಡು' ಅಂದದ್ದಕ್ಕೆ 'ಇಲ್ಲೋ ದೋಸ್ತ್, ಆ ಚಿಂತೀ ಬ್ಯಾಡ' ಅಂದ ಗಂಭೀರವಾಗಿ.

ಭಾನುವಾರದ ಪುರವಣಿಯಲ್ಲಿ ಧಾರಾವಾಹಿಯ ಯಶಸ್ಸಿನ ಕುರಿತು ಬೇರೆಯೆ ಕೋನದಲ್ಲಿ ಮನಮುಟ್ಟುವಂತೆ ವರದಿಯಿತ್ತು. ಆ ಭವನದ ಫೋಟೊಗಳು, ಅದರ ಇತಿಹಾಸದ ವಿವರಗಳಿದ್ದವು. ಮನೆಯಲ್ಲಿರಬಹುದಾದ ಖಡ್ಗ ಮುಂತಾದ ಪುರಾತನ ವಸ್ತುಸಂಗ್ರಹವನ್ನು